# ಪಾಶ ಪ್ರಪಂಚ

ನಾವು 'ಪಾಶ' ಎಂಬ ಮಾತು ಕೇಳಿದೊಡನೆ, 'ಯಮಪಾಶ' ಎಂಬುದು ನಮ್ಮ ನೆನಪಿಗೆ ಬರುತ್ತದೆ. ಪಾಶ ಎಂಬುದಕ್ಕೆ 'ಹಗ್ಗ' ಎಂದು ವಾಚ್ಯಾರ್ಥ. ಆದರೆ, ಇದೇ ಪದ ಲಕ್ಷಣಾರ್ಥದಲ್ಲಿ 'ಬಂಧನ' ಎಂಬ ಅರ್ಥವನ್ನು ನೀಡುತ್ತದೆ. ನಾವು ಪ್ರತಿನಿತ್ಯ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿರುತ್ತೇವೆ. ಅವು ಮನಸ್ಸನ್ನು ಗಲಿಬಿಲಿಗೊಳಿಸುತ್ತಿರುತ್ತವೆ. ನಾವು ಆಗಾಗ್ಗೆ 'ಆಶಾಪಾಶ' ಎಂಬ ನುಡಿಗಟ್ಟನ್ನೂ ಕೇಳುತ್ತಿರುತ್ತೇವೆ. ನಮ್ಮದು ಮನುಷ್ಯ ಸಹಜ ಪ್ರವೃತ್ತಿಯಷ್ಟೆ. ಈ ಪ್ರವೃತ್ತಿಯು ಆಶೆಗಳ ಬೆನ್ನನ್ನು ಹತ್ತುತ್ತಾ ಹೋಗುತ್ತಿರುತ್ತದೆ. ಮನುಷ್ಯನ ಇಂಥ ಆಸೆಗಳಿಗೆ ಕೊನೆಯಿಲ್ಲ. ಇದೂ ಕೂಡ 'ಪಾಶ'ವೇ. ಇದರ ಜತೆಗೆ ತತ್ತ್ವಜ್ಞಾನದಲ್ಲಿಯೂ 'ಪಾಶ' ಎಂಬ ಮಾತು ಬರುತ್ತದೆ. ಇಲ್ಲಿ ಬರುವ ಪಾಶದ ತತ್ತ್ವಾರ್ಥವನ್ನು ನಾವು ತುಸು ಗಮನಿಸೋಣ. ದೇಹದಿಂದ ಹೊರತಾದುದು ಯಾವುದುಂಟೋ ಅದು ಆತ್ಮವಷ್ಟೆ. ಇದು ಚೈತನ್ಯ ಪದಾರ್ಥ. ಈ ಆತ್ಮನಲ್ಲಿ ಶಿವಶಕ್ತಿಗಳನ್ನು ಪ್ರತಿನಿಧಿಸುವ ಜ್ಞಾನ ಮತ್ತು ಕ್ರಿಯಾಶಕ್ತಿಗಳುಂಟು. ಇವುಗಳನ್ನು ಮರೆ ಮಾಡಿರುವುದೇ ಯಾವುದೋ ಅದು ಪಾಶ. ಕಾಶ್ಮೀರದ ಶೈವತಂತ್ರವು ಪಾಶದ ವಿವರಣೆಯನ್ನು ನಮಗೆ ನೀಡುತ್ತದೆ. ಇದು ಐದು ಬಗೆ. ಮಲ–ಮಾಯಾ–ಕರ್ಮ–ಬಿಂದು–ತಿರೋಧಾನ. ನಾವು ಪಾಶದ ಈ ಐದು ಬಗೆಗಳ ಸ್ವರೂಪವನ್ನು ನಾವೀಗ ತುಸು ತಿಳಿಯೋಣ.

ಆತ್ಮದ ಚೈತನ್ಯ ಪ್ರಕಾಶವನ್ನು ಮಸುಕುಗೊಳಿಸಿ, ಮಾಯಾಬೀಜವು ಅಂಕುರಿಸಲು ಸಾಧನವಾದದ್ದು ಯಾವುದುಂಟೋ ಅದು ಮಲಪಾಶ. ಇದು ಆತ್ಮಕ್ಕೆ ಭೋಕ್ತೃತ್ವವನ್ನು ಹೇರುತ್ತದೆ. ಇದು ಎಲ್ಲವನ್ನು ಆವರಿಸಿಕೊಂಡು, ಪರಿಪಾಕ ವಶದಿಂದ ದೊರೆತ ದೀಕ್ಷಾವಿಶೇಷದಿಂದ ತೊಲಗುವಂಥ ಹಲವು ವಿಧವಾದ ಅಪಶಕ್ತಿಗಳಿಂದ ಪರಿಪುಷ್ಟವಾಗಿರುತ್ತದೆ. ಇದನ್ನೇ ಮಲಪಾಶ ಎನ್ನುತ್ತಾರೆ. ಇದಕ್ಕೆ ಅಜ್ಞಾನ, ಅವಿದ್ಯೆ ಆವೃತ್ತಿ, ಅಂಜನ, ಅಶುದ್ಧಿ, ಆಣವ, ಅನಿರ್ಮಲ, ಮೃತ್ಯು, ಮೂರ್ಛೆ, ತಿರಸ್ಕಾರ, ಋಕ್, ಪಶುತ್ವ ಎಂಬಿವೆಲ್ಲಾ ಪರ್ಯಾಯ ಪದಗಳೇ ಆಗಿವೆ. ಈ ಪಾಶಕ್ಕೆ ಏಳು ಬಗೆಯ ಅವಸ್ಥೆಗಳುಂಟು. ಅವು: ಮೋಹ, ಮದ, ರಾಗ, ತಾಪ, ತೋಷ, ವಿಷಾದ, ವೈಚಿತ್ರ್ಯ. ಇದಿಷ್ಟು 'ಮಲಪಾಶ'ಕ್ಕೆ ಸಂಬಂಧಪಟ್ಟದ್ದು.

ಇನ್ನು ಮಾಯಾಪಾಶ ಎರಡನೆಯದು. ಮೋಹವು ಆತ್ಮವನ್ನು ಆವರಿಸುತ್ತದೆಯಷ್ಟೆ. ಮೋಹ, ಮಹಾಮೋಹ, ಮಿಶ್ರತಾಮಿಶ್ರ, ಅಂಧತಾಮಿಶ್ರ ಎಂಬಿವೆಲ್ಲಾ ಮಾಯಾಪಾಶ ಎಂದೆನಿಸಿಕೊಳ್ಳುತ್ತದೆ. ಈ ಮಾಯಾಪಾಶವು ಅನೇಕ ವಿಷಯಗಳಿಂದ ಕೂಡಿರುತ್ತದೆ. ತಿಳಿಯುವ ಕ್ರಿಯೆ, ಭೋಗ ಲೋಲುಪತೆ ಮುಂತಾದ ವೈಷಯಿಕ ಕ್ರಿಯೆಗಳ ಜತೆ ಮಾಯಾಪಾಶ ಹಾಸುಹೊಕ್ಕಾಗಿರುತ್ತದೆ. ಈ ಮಾಯಾಪಾಶವು ಹಲವು ಗುಣಗಳನ್ನು ಹೊಂದಿದೆ. ಏಕತ್ವ, ಜಡತ್ವ, ಪರಿಣಾಮಿತ್ವ, ಮೋಹಕತ್ವ, ವಸ್ತುರೂಪತ್ವ, ಹೀಗೆ ಹಲವು ಗುಣಧರ್ಮಗಳಿಂದ ಇದು ಕೂಡಿರುತ್ತದೆ. ಇದು ನಿತ್ಯವ್ಯಾಪಕವಾಗಿರುವ ಪಾಶವಿಶೇಷ.

ಇನ್ನು ಪಾಶ ಪ್ರಪಂಚದಲ್ಲಿ ಮೂರನೆಯದು ಕರ್ಮಪಾಶ. ಇದು ಚೈತನ್ಯ, ಕ್ರಿಯೆ, ಶಕ್ತಿ ಇವುಗಳಿಗೆ ವಿರುದ್ಧವಾಗಿರುತ್ತದೆ. ಉತ್ತಮ–ಮಧ್ಯಮ–ಅಧಮ ಭೇದದಿಂದ ತ್ರೈಗುಣ್ಯವೆಂದು ಎನಿಸಿಕೊಳ್ಳುತ್ತದೆ. ಬಾಹ್ಯ–ಅಭ್ಯಂತರದಿಂದಾಗಿ ಇದು ಎರಡು ವಿಧವಾಗಿರುತ್ತದೆ. ಸುಕೃತ–ದುಷ್ಕೃತ ರೂಪವಾಗಿರುವ ಈ ಕರ್ಮವು ಧರ್ಮ, ಜ್ಞಾನ, ಐಶ್ವರ್ಯ, ವೈರಾಗ್ಯ ಮತ್ತು ಅಧರ್ಮ, ಅಜ್ಞಾನ, ಅನೈಶ್ವರ್ಯ, ಅವೈರಾಗ್ಯ ಎಂಬ ಎಂಟು ಬಗೆಗಳಿಂದ ಕೂಡಿ 'ಅಪೂರ್ವ' ಎಂಬ ಹೆಸರಿನಿಂದ ಸಂಸ್ಕಾರಕ್ಕೊಳಗಾಗಿದೆ. ಈ ಎಂಟು ಗುಣಗಳು ಸಾಂಸಿದ್ಧಿಕವೆಂದೂ ವೈನೈಮಿಕವೆಂದೂ ಪ್ರಾಕೃತವೆಂದೂ ಮೂರು ಬಗೆ. ಸಾಂಸಿದ್ಧಿಕಧರ್ಮದಿಂದ ವಶ್ಯಂದಿಗಳೂ ಜ್ಞಾನದಿಂದ ಧರ್ಮಪರಿಜ್ಞಾನಾದಿಗಳೂ ಐಶ್ವರ್ಯದಿಂದ ವಿಘ್ನಸಮೂಹ ನಿವೃತ್ತಿಯೂ ವೈರಾಗ್ಯದಿಂದ ಭೋಗಪರಿತ್ಯಾಗವೂ ಉಂಟಾಗುವುದು. ಇನ್ನು ವೈನೈಮಿಕ ಮತ್ತು ಪ್ರಾಕೃತಗಳಾದ ಜ್ಞಾನದಿಂದ ಮುಕ್ತ್ಯಾದಿಗಳೂ ಐಶ್ವರ್ಯದಿಂದ ಸಿದ್ಧ್ಯಾದಿಗಳೂ ವೈರಾಗ್ಯದಿಂದ ಪ್ರಕೃತಿಲಯಾದಿಗಳೂ ಉಂಟಾಗುತ್ತವೆ. ಹೀಗಾಗಿ, ಸಕಲಕರ್ಮ ಸಂಸ್ಕಾರಗಳೂ ಬುದ್ಧಿಯಲ್ಲಿ ಸೇರಿಕೊಳ್ಳುತ್ತವೆ. ಆಗ ಈ ಬುದ್ಧಿಯು ಮಾಯೆಯೊಳಗೆ ಅಡಗಿಕೊಳ್ಳುತ್ತದೆ. ಅನಂತರ ಮಾಯೆಯೇ ಕರ್ಮಕ್ಕೆ ಆಶ್ರಯವಾಗುತ್ತದೆ! ಈ ಕರ್ಮಪಾಶವು ಮಾತು, ಮನಸ್ಸು, ದೇಹವೆಂಬ ತ್ರಿವಿಧಕರಣದಿಂದ ಜನಿಸುತ್ತದೆ. ಈ ಕರ್ಮಪಾಶಕ್ಕೆ ಭೋಗಪ್ರದತ್ವವೂ ಉಂಟು.

ಈಗ ನಾಲ್ಕನೇ ಬಿಂದುಪಾಶವನ್ನು ತಿಳಿಯೋಣ. ಇದು ನಿರತಿಶಯ ಸುಖ, ಅನುಭವಲಕ್ಷ್ಯ, ಭೋಗಸಾಧನಕಾರ್ಯ ಸಮೂಹ ಇವೆಲ್ಲವೂ ಜನಿಸುವುದಕ್ಕೆ ಬಿಂದು ಉಪಾದಾನಕಾರಣವಾಗಿದೆ. ಇದು ಮಲಪಾಶದೊಡನೆ ಆಗಂತುಕ ಪಾಶ ಎನಿಸಿಕೊಂಡಿದೆ. ಈ ಬಿಂದುಪಾಶಕ್ಕೆ ಕೆಲವು ಪರ್ಯಾಯ ನಾಮಗಳುಂಟು. ಮಹಾಮಾಯೆ, ಕುಟಿಲೆ, ಕುಂಡಲಿ, ಪರವಾದ, ಪರಬಿಂದು, ಪರವಿದ್ಯೆ ಹೀಗೆ ಹಲವು ನಾಮಗಳಿವೆ. ನಾಲ್ಕು ಬಗೆಯ ವಾಕ್ಕುಗಳುಂಟಷ್ಟೆ. ಅವುಗಳಿಗೆ ಈ ಬಿಂದುಪಾಶವೇ ಕಾರಣ. ಪರಾ, ಪಶ್ಯಂತಿ, ಮಧ್ಯಮಾ, ವೈಖರಿ ಎಂಬ ನಾಲ್ಕು ಬಗೆಯ ವಾಕ್‌ಪ್ರಪಂಚ ಪರಮೇಶ್ವರನಿಂದ ಪ್ರಾರಂಭಗೊಂಡು ಋಷಿಗಳಿಗೆ ಅದು ಇಳಿದು ಮುಂದೆ ಬಂದಿತು. ಅದು ತಿಳಿದವರಿಗೆ ಕಾಮಧೇನು ಆಯಿತು.

ನಾವಿನ್ನು ಕೊನೆಯದಾದ ತಿರೋಧಾನಪಾಶ ಕುರಿತು ತುಸು ತಿಳಿಯೋಣ. ಈ ಹಿಂದೆ ಹೇಳಿದ ನಾಲ್ಕು ವಿಧದ ಪಾಶಗಳು ಅಚೇತನವಾಗಿವೆ. ಅವು ತಮ್ಮ ತಮ್ಮ ವ್ಯಾಪಾರದಲ್ಲಿ ತಮಗೆ ತಾವೇ ಪ್ರವರ್ತಿಸಲಾರವು. ಹೀಗಾಗಿ, ಪಾಶದ ಅನುಕರಣವ್ಯಾಪಾರವಾದ ಶಿವಶಕ್ತಿ ವಿಶೇಷವೇ ತಿರೋಧಾನ ಎಂದೆನಿಸಿಕೊಳ್ಳುತ್ತದೆ! ಇಲ್ಲಿ ತಿರೋಧಾನ ಎಂದರೆ ಕಾಣಿಸದೇ ಹೋಗುವುದೆಂದು ಅರ್ಥ. ನಾವು ಹೀಗೆ ಮಲ, ಮಾಯಾ, ಕರ್ಮ, ಬಿಂದು ಮತ್ತು ತಿರೋಧಾನಗಳೆಂಬ ಪಾಶಪ್ರಪಂಚದಲ್ಲಿ ಇಂದಿಗೂ ಬಿದ್ದಿದ್ದೇವೆ. ಇವುಗಳಿಂದ ನಾವು ಮುಕ್ತರಾಗುವುದು ಅವಶ್ಯ. ನಾವು 'ಶಿವಸಿದ್ಧಾಂತ'ದ ತತ್ತ್ವವನ್ನು ಹಿಡಿದರೆ, ಈ ಐದು ಬಗೆಯ ಪಾಶಗಳು ಕಳಚಿಬೀಳುತ್ತವೆ. ನಾವು ಬದುಕಿರುವ ಈ ಪ್ರಪಂಚವು ಐದು ಪಾಶಗಳಿಂದ ಸುತ್ತುವರೆದಿದೆ. ಅವು ನಮ್ಮನ್ನು ಹಲವು ರೀತಿಯಿಂದ ಸುತ್ತುವರೆದಿವೆ. ವ್ಯಕ್ತಿಪಾಶ, ಗೃಹಪಾಶ, ಸಮಾಜಪಾಶಗಳು ಹಿಂಸ್ರಕವಾಗಿ ನಮ್ಮ ಬೆನ್ನನ್ನು ಹತ್ತಿಬಿಟ್ಟವೆ. ನಾವು ಇವುಗಳಿಂದ ಬಿಡುಗಡೆ ಪಡೆಯುವುದೊಂದೇ ನಮಗಿರುವ ಅಂತಿಮ ಗಂತವ್ಯ!

■ ಪುರಂಜೀವಿ




॥ ಶ್ರೀ ಗುರು ಓಂ ಶ್ರೀ ಸದ್ಗುರು ಸಾಯಿರಾಂ ॥ ಭಾರತದ ಪ್ರಖ್ಯಾತ ಜ್ಯೋತಿಷ್ಯರು

ಬಿಳಿಗಿರಿ ರಂಗನಬೆಟ್ಟದಿಂದ ನೇರ ಪರಿಹಾರ.

**ಓಂ ಶ್ರೀ ಸಾಯಿಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು**

ಕೇರಳದ ಮಹಾಜ್ಞಾನಿ ದೈವಜ್ಞ । ಮಾತಾ ಕಾಳಿಕಾದೇವಿ ಆರಾಧಕರು



**ಪಂಡಿತ್ ಶಕ್ತಿಪ್ರಸಾದ್ ಗುರೂಜಿ 9916774449**

ನಿಮ್ಮ ಸಮಸ್ಯೆಗಳಾದ ಮಾಟ-ಮಂತ್ರ, ಶತ್ರುನಾಶ, ಸ್ತ್ರೀ-ಪುರುಷ ವಶೀಕರಣ, ಕೋರ್ಟ್‌ಕೇಸ್, ವ್ಯಾಪಾರದಲ್ಲಿ ತೊಂದರೆ, ಉದ್ಯೋಗ, ವಿದೇಶ ಪ್ರಯಾಣ, ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿಚಾತನ್ ತಪೋಶಕ್ತಿಯಿಂದ 2 ದಿನಗಳಲ್ಲಿ ಅಂತಿಮ ಪರಿಹಾರ ಮಾಡುತ್ತಾರೆ.

ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಫೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.

ಕೇರಳದ ಅಷ್ಟಮಂಗಲ ಪ್ರಶ್ನೆ, ಅರೂಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮ ದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ತಿಳಿಸುತ್ತಾರೆ.

ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಗುಪ್ತವಾಗಿ ಇಡಲಾಗುವುದು.

Get your Any Problem 100% Solutions with in 2 Days.

ವಿ.ಸೂ.: ನಮ್ಮನ್ನು ಬಿಟ್ಟು ಬೇರೆ ಯಾರಾದರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.